**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**
**ಸಿ ಸಿ. 1565/2020**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ದಿನಾಂಕಃ 28-06-2024** **ಪಿ.ಡಬ್ಲ್ಯೂ 1**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಯು ಹೆಚ್ ವಕೀಲರಿಂದಃ**

ನನ್ನ ಹೆಂಡತಿ ಅಣ್ಣನ ಊರು ಲಕ್ಕಶೆಟ್ಟಿಹಳ್ಳಿ . ಈ ಮೊದಲು ಹೇಳಿದ ಕುರ್ಕಿ ಗ್ರಾಮದಲ್ಲಿ ರಾಮನಹಳ್ಳಿ ಮನೆತನ ಸದರಿ ಗ್ರಾಮದಲ್ಲಿ ಎಂದರೆ ಸರಿಯಲ್ಲ. ಈ ರೀತಿ ಸುಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮನೆತನದ ಹೆಸರು ರಾಮನಹಳ್ಳಿ ಅಲ್ಲ ರಾಗನಹಳ್ಳಿ ಎಂದು ನುಡಿಯುತ್ತಾರೆ. ಈ ಮೊದಲು ಸಾಕ್ಷ್ಯಕ್ಕೆ ನಾನು ನನ್ನ ವಕೀಲರು ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ. ನಾನು ಏನು ಸಾಕ್ಷ್ಯ ನುಡಿದಿದ್ದೇನೆ ಎಂದು ನನ್ನ ವಕೀಲರನ್ನು ಮರಳಿ ಕೇಳಿ ತಿಳಿದುಕೊಂಡಿಲ್ಲ. ಈ ರೀತಿ ಕೇಳಿ ತಿಳಿದುಕೊಳ್ಳಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನನ್ನ ಸಾಕ್ಷ್ಯದಲ್ಲಿ ಹೇಳಿದಂತೆ ಕುರ್ಕಿ ಯಾವುದೇ ಮನೆತನ ಇಲ್ಲ ಆದ್ದರಿಂದ ನಾನು ಏನು ಸಾಕ್ಷ್ಯ ನುಡಿದಿದ್ದೇನೆ ಎಂದು ಕೇಳಿ ತಿಳಿದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ 6 -7 ವರ್ಷಗಳಿಂದ ಪರಿಚಯ. ಸದರಿ ವಿಚಾರವನ್ನು ನಾನು ನನ್ನ ಪಿರ್ಯಾದಿ ಹಾಗೂ ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಸಿದ ಬಗ್ಗೆ ನನಗೆ ನೆನಪಿಲ್ಲ. ಈಗ ಸಾಕ್ಷ್ಯ ನುಡಿಯುವ ನನ್ನ ಪಿರ್ಯಾದಿ ಹಾಗೂ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ಸಂಗತಿಗಳನ್ನು ನಾನು ತಿಳಿದುಕೊಂಡಿಲ್ಲ. ಈ ರೀತಿ ಕೇಳಿ ತಿಳಿದುಕೊಳ್ಳಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಅಂತಹ ಯಾವುದೇ ಸಂಗತಿಗಳನ್ನು ಬರೆಸಿಲ್ಲ ಆದ್ದರಿಂದ ನಾನು ತಿಳಿದುಕೊಂಡಿಲ್ಲ ಎಂದರೆ ಸರಿಯಲ್ಲ. ಸದರಿ ಸಂಗತಿಗಳನ್ನು ಪಿರ್ಯಾದಿ ಹಾಗೂ ಮುಖ್ಯ ವಿಚಾರಣೆಯಲ್ಲಿ ಬರೆಸಿಲ್ಲ ಬರೆಸದಿದ್ದರೂ ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ನಿಪಿ.1 ನ್ನು ದಿಃ 08.06.2020 ಎಂದು ನಮೂದು ಮಾಡಿ ನೀಡಿರುತ್ತಾರೆ. ಅದೇ ದಿನಾಂಕ ನಿಪಿ.1 ರಲ್ಲಿ ಇದೆಯಾ ಎಂದರೆ ಸಾಕ್ಷಿಯು ಇರಬಹುದು ಎಂದುನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು 14.08.2020 ಎಂದು ನುಡಿಯುತ್ತಾರೆ. ನಿಪಿ.1 ಚೆಕ್ ನ್ನು ದಿಃ 15.06.2020 ರಂದು ನಗದೀಕರಣಕ್ಕಾಗಿ ಬ್ಯಾಂಕಿಗೆ ಸಲ್ಲಿಸಿರುತ್ತೇನೆ. ಸದರಿ ಚೆಕ್ ನಗದೀಕರಣವಾಗದೇ ಹಣ ಇಲ್ಲ ಎಂದು ದಿಃ 16.09.2020 ರಂದು ಹಿಂಬರಹ ಬಂದಿದೆ. ಆರೋಪಿಗೆ ನೋಟೀಸನ್ನು ನೀಡಿದ ದಿನಾಂಕ ನನಗೆ ನೆನಪಿಲ್ಲ. ಸದರಿ ನೋಟಿಸಿಗೆ ಆರೋಪಿ ಮರುಉತ್ತರವನ್ನು ನೀಡಿದ್ದಾರೆ ಅಥವಾ ಇಲ್ಲ ಎಂದು ನನಗೆ ಗೊತ್ತಿಲ್ಲ. ಸದರಿ ವಿಚಾರವನ್ನು ನಾನು ನನ್ನ ವಕೀಲರಿಗೆ ಕೇಳಿ ತಿಳಿದುಕೊಂಡಿಲ್ಲ. ಸದರಿ ವಿಚಾರವನ್ನು ನನ್ನ ಪಿರ್ಯಾದಿ ಮತ್ತು ಮುಖ್ಯ ವಿಚಾರಣೆಯಲ್ಲಿ ಬರೆದಿದ್ದಾರಾ ಅಥವಾ ಇಲ್ಲ ಎಂದು ನಾನು ಕೇಳಿ ತಿಳಿದುಕೊಂಡಿಲ್ಲ. ಆರೋಪಿ ನನಗೆ ಮರುಉತ್ತರ ನೀಡಿದ್ದರೂ ಸಹ ನೀಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಮರುಉತ್ತರ ನೀಡಿದ ಬಗ್ಗೆ ನನ್ನ ಪಿರ್ಯಾದಿಯಲ್ಲಿ ಹೇಳಿದ್ದರೂ ಸಹ ಗೊತ್ತಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಬ್ಯಾಂಕಿಗೆ ಹಿಂಬರಹ ಬಂದ ನಂತರ ನಾನು ಆರೋಪಿಗೆ ಹಣ ನೀಡಲು ಕೇಳಿಲ್ಲ. ಈ ರೀತಿ ಹಣ ಕೇಳಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಆರೋಪಿಗೆ ನಾನು ಹಣ ನೀಡಿಲ್ಲ ಆರೋಪಿ ನನಗೆ ಚೆಕ್

ನೀಡಿಲ್ಲ ಆದ್ದರಿಂದ ನಾನು ಅವರಿಗೆ ಹಣ ನೀಡಲು ಕೇಳಿಲ್ಲ ಎಂದರೆ ಸರಿಯಲ್ಲ.

ಸಾಮಾನ್ಯವಾಗಿ ಯಾರಿಗಾದರೂ ಹಣ ನೀಡಬೇಕಾದರೆ ಹಣ ಪಡೆಯುವವರ ಆರ್ಥಿಕ ಪರಿಸ್ಥಿತಿಯನ್ನು ವಿಚಾರಿಸಿ ಹಣ ನೀಡುತ್ತಾರೆ ಎಂದರೆ ಸರಿ. ಅದೇ ರೀತಿ ನಾನು ಆರೋಪಿಯ ಆರ್ಥಿಕ ಸ್ಥಿತಿಯನ್ನು ವಿಚಾರಿಸಿ ಹಣವನ್ನು ನೀಡಿರುತ್ತೇನೆ ಎಂದರೆ ಸರಿ. ಆರೋಪಿಗೆ 5 ಲಕ್ಷ ದಷ್ಟು ಹಣವನ್ನು ಮರಳಿಸುವ ಸಾಮರ್ಥ್ಯ ಮತ್ತು ಅವಶ್ಯಕತೆ ಇಲ್ಲದಿದ್ದರೂ ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ತನ್ನ ವ್ಯಾನ್ ಗಾಗಿ ಯಾವ ಬ್ಯಾಂಕಿನಲ್ಲಿ ಸಾಲ ಪಡೆದಿದ್ದರು ಎಂದು ನನಗೆ ಮಾಹಿತಿ ಇಲ್ಲ. ಆರೋಪಿಯು ಎಷ್ಟು ಸಾಲವನ್ನು ಪಡೆದುಕೊಂಡಿದ್ದರು ಎಂದು ನನಗೆ ಮಾಹಿತಿ ಇಲ್ಲ. ಆರೋಪಿಯನ್ನು ಎಷ್ಟು ಸಾಲ ಇದೆ ಎಂದು ನಾನು ಕೇಳಿ ತಿಳಿದುಕೊಂಡಿಲ್ಲ.

ಎಲ್ ಎನ್ ಸುರೇಶ ನಮ್ಮ ಗ್ರಾಮದವರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಮತ್ತು ಸದರಿಯವರು ಒಂದೆ ಊರಿನವರು ಒಂದೇ ಸಮಾಜದವರು ಆದ್ದರಿಂದ ಪರಿಚಯ ಎಂದು ನುಡಿಯತ್ತಾರೆ. ಸದರಿ ಸುರೇಶ್ ಆರೋಪಿಯ ವಿರುದ್ಧ ಚೆಕ್ ಬೌನ್ಸ್ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ. ಅದೇ ರೀತಿ ನನಗೆ ಹಲಸಬಾಳು ಗ್ರಾಮದ ಸಂಬದಿಕರು ಇದ್ದಾರೆ ಎಂದರೆ ಸರಿ. ಅದೇ ರೀತಿ ಹನಗವಾಡಿಯಲ್ಲಿಯೂ ಸಹ ನನಗೆ ಪರಿಚಯಸ್ಥರು ಇದ್ದಾರೆ. ಪ್ರಕಾಶ್ ಎನ್ನುವವರ ಪರಿಚಯ ಇಲ್ಲ. ಬಸವರಾಜ ಪೂಜಾರ ಹನುಮಂತಪ್ಪ ರವರ ಪರಿಚಯ ಇದೆ. ಸದರಿಯವರು ಗಸ್ತು ವಾಹನದ ಚಾಲಕರಾಗಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಸದರಿ ಬಸವರಾಜ ಎನ್ನುವವರು ನನ್ನ ದೂರದ ಸಂಬಂಧಿಕರು . ನಾನು ಮತ್ತು ಸದರಿ ಬಸವರಾಜ ವಿಶ್ವಾಸಿಕರು ಎಂದರೆ ಸರಿ. ಮಾರುತಿ ನನಗೆ ಗೊತ್ತಿಲ್ಲ. ಶಿವಬಸವ ಡಾಬಾ ದ ಮಾಲೀಕರಾದ ಪರಮೇಶ್ವರಪ್ಪ ನವರ ಪರಿಚಯ ನನಗೆ ಇಲ್ಲ. ಆರೋಪಿ ಬಸವರಾಜ ತಂದೆ ಪೂಜಾರ ಹನುಮತಂಪ್ಪ ಅವರಿಗೆ ನೀಡಿರುವ ಖಾಲಿ ಚೆಕ್ ನ್ನು ದುರುಪಯೋಗ ಪಡಿಸಿಕೊಂಡು ನನ್ನ ಮೂಲಕ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಾಪಿ ಬಸವರಾಜರವರಿಗೆ ನೀಡಿದ ಖಾಲಿ ಚೆಕ್ ನ್ನು ನಾನು ಮತ್ತು ಸದರಿ ಬಸವರಾಜ ರವರು ಸೇರಿ ಸಹಿ ಮತ್ತು ಅದರಲ್ಲಿನ ಸಂಗತಿಗಳನ್ನು ಸೃಷ್ಟಿ ಮಾಡಿ ಪ್ರಕರಣ ದಾಖಲಿಸಿದ್ದೆವೆ ಎಂದರೆ ಸರಿಯಲ್ಲ. ಸದರಿ ಬಸವರಾಜ ರವರು ಒಬ್ಬ ಸರ್ಕಾರಿ ನೌಕರರಾಗಿರುವುದರಿಂದ ನನ್ನ ಮೂಲಕ ಈ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಬಸವರಾಜರವರ ಮಾತು ಕೇಳಿಕೊಂಡು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಎಲ್ಲಾ ಮಾಹಿತಿಯನ್ನು ಸದರಿ ಬಸವರಾಜ ರವರೇ ನೀಡಿದ್ದರೂ ಸಹ ನಾನು ನೀಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಹರಿಹರ